Malnad Development Board

7 5. Sri S. BANGARAPPA (Sorab).—

Will the Chief Minister be pleased to state :—

(*a*) whether the Government has a proposal before it for constituting Malnad Development Board for the purpose of Developing the Malnad area in the State ;

(*b*) if so, when such a Board would be constituted ?

Sri DEVENDRAPPA GHALAPPA (Minister of State for Planning and Informetion) [on behalf Sri D. DEVARAJ URS (Chief Minister)].—

(*a*) and (*b*) No, Sir. But an integrated development plan for the Western Ghats Region including the coastal areas is being prepared.

ಶ್ರೀ ಎಸ್ ಬಂಗಾರಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಈ ಬಗ್ಗೆ ಪರೀಕ್ಷಣೆ ಮಾಡುವುದಾಗಿ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು ; ಆ ಒಂದು ಆಶ್ವಾಸನೆಯನ್ನು ಅನುಸರಿಸಿ ಈಗಲಾದರೂ ಒಂದು ಮಲೆನಾಡು ಅಭಿವೃದ್ಧಿ ಮಂಡಲಯನ್ನು ರಚನೆ ಮಾಡುವುದಕ್ಕೆ ಪುನಃ ಯೋಚನೆ ಮಾಡುತ್ತೀರಾ ?

† ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ಇರತಕ್ಕಂಥ ಮಲೆನಾಡು ಏರಿಯಾದಲ್ಲಿ ಸಮಮಲೆನಾಡು ಏರಿಯಾ ಕೂಡ ಬರುತ್ತದೆ. ಆದ್ದರಿಂದ ಮಲೆನಾಡಿನ ಸಮಗ್ರ ಅಭಿವೃದ್ಧಿಗಾಗಿ ಡೆವಲಪ್‌ಮೆಂಟ್ ಕಮೀಷನರ್ ಅವರ ಚೇರ್‌ಮನ್‌ಷಿಪ್‌ನಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯಲ್ಲಿ ಚಿಕ್ಕಮಗಳೂರು ಸಂಬಂಧಪಟ್ಟ ಅಧಿಕಾರಿಗಳೆಲ್ಲಾ ಸದಸ್ಯರಾಗಿದ್ದಾರೆ. ಈಗ ಸಧ್ಯಕ್ಕೆ ಆ ಕಮಿಟಿಯ ಕೆಲಸ ನಡೆಯುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಬಗ್ಗೆ ಪ್ಲಾನ್ಸ್ ತಯಾರಾಗುತ್ತಿದೆ ಎಂದು ಹೇಳಿದಿರಿ ; ಈ ಪ್ಲಾನ್ಸ್ ಎಷ್ಟು ದಿವಸದಲ್ಲಿ ಮುಗಿಯುತ್ತದೆ ಮತ್ತು ಅವನ್ನು ತ್ವರಿತವಾಗಿ ಮಾಡುವ ಯೋಚನೆ ಏನಾದರು ಇದೆಯೇ ?

ಶ್ರೀ ದೇವೇಂದ್ರಪ್ಪ ಘಾಳಪ್ಪ —5 ನೇ ಪಂಚವಾರ್ಷಿಕ ಯೋಜನೆಯೊಳಗೆ ತಯಾರು ಮಾಡಿ ಅಳವಡಿಸಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಕೇಂದ್ರದ ಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ಮಲೆನಾಡು ಅಭಿವೃದ್ಧಿಯನ್ನು ಚೆನಸಿವ್ಯಾಲ ಯೋಜನೆಯ ರೀತಿಯಲ್ಲಿ ಮಾಡಬಹುದೆಂದು ಹೇಳಿಕೆ ಕೊಟ್ಟಿದ್ದರು. ಆ ರೀತಿ ಏನಾದರು ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಯೋಚನೆ ಮಾಡಿದ್ದೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ. ಈಗ ಇನ್‌ಟೆನ್‌ಸಿವ್ ಪ್ರೋಗ್ರಾಮ್ ಮಾಡುತ್ತಿರುವಾಗ ಅದರಲ್ಲಿ ಚೆನಸಿವ್ಯಾಲ ಕವರ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕರಾವಳಿ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಈ ಯೋಜನೆಯ ಪ್ರಕಾರ ಮಲೆನಾಡಿನ ಯಾವ ಯಾವ ಭಾಗಗಳು ಸೇರುತ್ತವೆ ಎಂಬುದನ್ನು ಹೇಳುತ್ತೀರಾ ?

Sri DEVENDRAPPA GHALAPA.—They are :

Belgaum District.—Khanapur Taluka

Dharwar District.—Kalghatgi

North Kanara District.—Whole District

(SRI DEVENDRAPPA GHALAPPA)

South Kanara District.—Coondapur, Belthangadi, Karkala, Puttur & Sullia Taluks.

Coorg.—Whole District

Shimoga.—Hosnagara, Thirthalli Sagar, Shikaripur. Shimoga, Sorab Taluks

Chikmagalur.—Chikmagalur, Koppa, Mudigere, Sringeri, Narasimbarajapura, Tarikere Taluks

Hassan.—Alur and Manjarabad Taluks

Mysore.—Heggadadevanakote Taluk.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಇಲ್ಲಿ ಕರಾವಳಿ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ, ಈ ಯೋಜನೆಯನ್ನು ತಯಾರು ಮಾಡುವವರು ಯಾರು ? ಮತ್ತು ಯಾವ ರೀತಿ ತಯಾರು ಮಾಡುತ್ತಾರೆ ? ಇದರ ಬಗ್ಗೆ ಒಂದು ಮಂಡಲ ಮಾಡಿ ಅವರಿಗೆ ವಹಿಸುವುದು ಒಳ್ಳೆಯದಲ್ಲವೇ ? ಮತ್ತು ಮಲೆನಾಡಿನ ಅನುಕೂಲಗಳನ್ನು ನಾನಾ ರೀತಿಯಿಂದ ಉಪಯೋಗಿಸಿಕೊಳ್ಳಬೇಕಾದರೆ ಮಲೆನಾಡು ಅಭಿವೃದ್ಧಿ ಮಂಡಲಯನ್ನು ರಚನೆ ಮಾಡುವುದು ಅವಶ್ಯಕತೆ ಇಲ್ಲವೇ ?

Sri DEVENDRAPPA GHALAPPA.—ಅದರ ಸಂಬಂಧವಾಗಿಯೇ Technical team under the Chairmanship of a Member, Planning Commission is being constituted to consolidate the information and proposals, which would be dovetailed in the Fifth Five-Year Plan. Similarly, under the Chairmanship of the Development Commissioner preparation of the scheme under the various Departments, of forestry, animal husbandry, minor irrigation dairying, fishery, rural electrification, mineral development town-planning and tourism. ಇವರುಗಳಿಂದ ಟೆಕ್ನಿಕಲ್ ಸಜೆಷನ್ ಕೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ.

Sri B. SUBBIAH SHETTY.—Except Mangalore, in South Kanara, the entire Mangalore Taluk is as backward or as forward as any other taluk which you have included in the category of Malnad. May I know why Mangalore Taluka is left out in the list of Malnad areas which you have just now read out ?

Sri DEVENDRAPPA GHALAPA.—Notice.

ಶ್ರೀ ಬಾಪೂಗೌಡ ರಾಯಪ್ಪ.—ಮಲೆನಾಡಿನ ಅಭಿವೃದ್ಧಿ ಬಗ್ಗೆ ಮತ್ತು ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ತಯಾರು ಮಾಡುವ ಕಾರ್ಯಕ್ರಮವಿರುವಂತೆ ಮೈಸೂರು ರಾಜ್ಯದ ಬೇರೆ ಪ್ರದೇಶಗಳ ಬಗ್ಗೆ ಅಂದರೆ ಹಿಂದುಳಿದ ಭಾಗಗಳನ್ನು ಮುಂದೆ ತರುವ ಬಗ್ಗೆ ಒಂದು ಬೋರ್ಡನ್ನು ರಚನೆ ಮಾಡುತ್ತೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಆ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಮೈದಾನ ಏರಿಯಾಕ್ಕಿಂತ ಮಲೆನಾಡು ಏರಿಯಾದಿಂದ ಸರಕಾರಕ್ಕೆ ಹೆಚ್ಚು ಉತ್ಪನ್ನ ಬರುತ್ತಿದೆ. ಹಲವಾರು ಕೋಟಿ ರೂಪಾಯಿಗಳ ವರಮಾನ ದೊರಕುತ್ತಿದೆ. ಇದಕ್ಕಿಂತ ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಪಡೆಯುವ ದೃಷ್ಟಿಯಿಂದ ಮಲೆನಾಡು ಅಭಿವೃದ್ಧಿ ಮಂಡಲಯನ್ನು ರಚನೆ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತಿದ್ದೇನೆ. ಈ ಬಗ್ಗೆ ಸರ್ಕಾರದವರು ಪುನರ್‌ಪರಿಶೀಲನೆ ಮಾಡಿ ಜಾಗ್ರತೆ ಒಂದು ಮಂಡಲಯನ್ನು ರಚನೆ ಮಾಡುತ್ತೀರಾ ?

Mr. DEPUTY SPEAKER.—It is a suggestion for action.